**ಶ್ರೀ ಡಿ. ಮಂಜುನಾಥ್ :** ಜಯಪ್ರಕಾಶ್ ಹೆಗ್ಡೆಯವರು ಹೇಳಿದ್ದಾರೆ. ಅದೇ ರೀತಿ ಎಲ್ಲಾ ಕಡೆಯಿಂದ ನಾನು ಮಾಹಿತಿ ತರಿಸುತ್ತೇನೆ. ನಮ್ಮ ಅಧಿಕಾರಿಗಳಿಗೆ ಹೇಳಿ ಎಲ್ಲಿ ಬೋಗಸ್ ಇನ್‌ಸ್ಟಿಟ್ಯೂಷನ್ಸ್ ಇವೆ ಅವುಗಳ ಮಾಹಿತಿ ತರಿಸುತ್ತೇನೆ. ಒಬ್ಬ ಏನು ಮಾಡಿದ್ದಾನೆ ಅಫಿಲಿಯೇಟೆಡ್ ನ್ಯೂಸಿಲಿಂಡ್‌ಯೂನಿವರ್ಸಿಟಿ ಎಂದು ಮಾಡುತ್ತಾನೆ. ಆಸ್ಟ್ರೇಲಿಯಾ ಯೂನಿವರ್ಸಿಟಿ ಎಂದು ಇದೆ.

**ಅಧ್ಯಕ್ಷರು:** ಕೆ.ಎನ್. ಕೃಷ್ಣಮೂರ್ತಿಯವರೇ, ನಿಮ್ಮ ಪ್ರಶ್ನೆ ಇಂಧನ ಇಲಾಖೆಗೆ ವರ್ಗಾವಣೆಯಾಗಿದೆ.

163 (2406) **ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)** ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :-

ಅ) ಬೆಳ್ತಂಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಿಕೊಡಲಾಗಿದೆ ಹಾಗೂ ಇನ್ನೂ ಎಷ್ಟು ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯ ಕೊರತೆ ಇರುವುದನ್ನು ಗುರುತಿಸಲಾಗಿದೆ?

ಆ) ಕುಡಿಯುವ ನೀರಿನ ಕೊರತೆ ಇರುವ ಈ ಗ್ರಾಮಗಳಿಗೆ ಸಮರ್ಪಕ ವ್ಯವಸ್ಥೆಯನ್ನು ಅತಿ ಶೀಘ್ರವಾಗಿ ಒದಗಿಸಿಕೊಡುವಲ್ಲಿ ಸರ್ಕಾರದ ಕ್ರಮಗಳೇನು?

**ಶ್ರೀ ಬಿ.ಸತ್ಯನಾರಾಯಣ** (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕಿನ ಎಲ್ಲಾ ಗ್ರಾಮ/ಜನವಸತಿಗಳಿಗೆ ಕನಿಷ್ಠ ಒಂದು ಕುಡಿಯುವ ನೀರಿನ (ಜಲಮೂಲ) ಯೋಜನೆಯನ್ನು ಒದಗಿಸಲಾಗಿದೆ. ಆದಾಗ್ಯೂ ಬೇಸಿಗೆ ಕಾಲದಲ್ಲಿ ಕೆಲವು ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ಇಳಿಮುಖವಾದಾಗ ನೀರು ಪೂರೈಕೆ ವ್ಯವಸ್ಥೆಯಲ್ಲಿ ವ್ಯತ್ಯಯವಾಗುವ ಸಂಭವವಿರುತ್ತದೆ.

ಆ) ಕುಡಿಯುವ ನೀರು ಪೂರೈಕೆ ಪ್ರಮಾಣವನ್ನು ಉತ್ತಮಪಡಿಸಲು ಅಗತ್ಯ ಪುನಃಶ್ಚೇತನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಹಾಗೂ ಹಾಲಿಯಿರುವ ಯೋಜನೆಗಳ ನಿರಂತರತೆ ಕಾಪಾಡಲು ಮಳೆ ನೀರು ಕೊಯ್ಲಿನಂತಹ ಕಾರ್ಯಕ್ರಮಗಳಿಗೆ ವಿಶೇಷ ಆದ್ಯತೆಯನ್ನು ನೀಡಲಾಗುತ್ತಿದೆ. ತೀವ್ರ ಕುಡಿಯುವ ನೀರಿನ ಸಮಸ್ಯೆಯಾದಲ್ಲಿ ತಾಲ್ಲೂಕು ಮಟ್ಟದಲ್ಲಿ

ರಚಿಸಲಾಗಿರುವ ಕಾರ್ಯಪಡೆ ಸ್ಥಳೀಯ ಅವಶ್ಯಕತೆಯನುಸಾರ ಸಮರ್ಪಕ ಕುಡಿಯುವ ನೀರು ಪೂರೈಕೆ ಸಲುವಾಗಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

**ಶ್ರೀ ಪ್ರಭಾಕರ ಬಂಗೇರ ಕೆ :** ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ನೀರಿನ ವ್ಯವಸ್ಥೆ ಆಗಿದೆ ಎಂದು ಹೇಳಿದ್ದಾರೆ. ಆದರೆ ಯಾವುದಕ್ಕೆ ಆಗಲಿಲ್ಲವೆಂದು ಕೇಳಿದ್ದಕ್ಕೆ ಒಂದು ಗ್ರಾಮಕ್ಕೆ ಒಂದು ಕಡೆ ಕೊಟ್ಟಾಗ ಅದು ಸಮರ್ಪಕವಾಗಿ ಕೊಟ್ಟ ಹಾಗೆ ಆಗುವುದಿಲ್ಲ. ಯಾವ ಗ್ರಾಮದ ಮೂಲೆಗಳಿಗೆ ಕುಡಿಯುವ ನೀರಿನ ಅವಶ್ಯಕತೆ ಇರುತ್ತದೆ ಹೀಗಾಗಿ ಎಷ್ಟು ಪೂರೈಕೆ ಮಾಡಿದ್ದೀರಿ ಎಂದು ಹೇಳಿದಾಗ ಒಂದು ಗ್ರಾಮದಲ್ಲಿ ಒಂದು ಕಡೆ ಪೂರೈಕೆ ಮಾಡಿದ್ದೇವೆಂದು ಹೇಳಿದ್ದಾರೆ. ನೀರಿನ ಕೊರತೆ ಇರುವಾಗ ಏನು ಮಾಡುವುದು ಎಂದು ಹೇಳಿದಾಗ ಈಗಾಗಲೇ ಅವರು ಹೇಳಿದ ಹಾಗೆ ಕಾರ್ಯ ಪಡೆ ನೇಮಿಸಿದ್ದೇವೆ. ಅಲ್ಲಿ ಈಗಾಗಲೇ ನಾವು ಈ ಬಗ್ಗೆ ಚರ್ಚೆಗಳನ್ನು ಮಾಡಿದ್ದೇವೆ. ಆದರೆ ಹಣವನ್ನು ಒದಗಿಸಿಲ್ಲ. ನಾನು ಹೇಳುವುದೇನೆಂದರೆ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಪಡೆಗಳನ್ನು ರಚನೆ ಮಾಡಿರುವಾಗ ಅಲ್ಲಿಯೂ ಕೂಡ ಈಗಾಗಲೇ ಹಲವಾರು ಶಾಸಕರು ಇದರ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ಜಿಲ್ಲಾ ಪಂಚಾಯತಿ ಸದಸ್ಯರು ತಾಲ್ಲೂಕು ಪಂಚಾಯತಿ ಸದಸ್ಯರನ್ನು ಇಟ್ಟುಕೊಂಡು ಈ ಕಾಮಗಾರಿಗಳನ್ನು ಮಾಡುವುದಕ್ಕೆ ಸಾಧ್ಯವೇ? ಇದರ ಬಗ್ಗೆ ಕೂಡ ತಾವು ಸಮಗ್ರವಾದ ವಿವರಣೆಯನ್ನು ಕೊಡಬೇಕು. ನಾನು ಹೇಳುವುದೇನೆಂದರೆ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಡದಿದ್ದರೆ ನಮ್ಮಿಂದ ಇದನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಕಳೆದ ಭಾರಿಯೇ ಹೇಳಲಾಗಿತ್ತು. ಆದುದರಿಂದ ಈಗ ಇದರ ಬಗ್ಗೆ ಸರ್ಕಾರದ ಸಚಿವರು ಉತ್ತರಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳಬಯಸುತ್ತೇನೆ.

**ಶ್ರೀ ಬಿ. ಸತ್ಯನಾರಾಯಣ** (ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯದ ಪ್ರತಿಯೊಂದು ಜನವಸತಿ ಪ್ರದೇಶಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ನಮ್ಮ ಸರ್ಕಾರಗಳು ಮಾಡಿಕೊಂಡು ಬಂದಿವೆ. ಹೀಗಿರುವಾಗ ಯಾವುದೇ ರೀತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೇ ಇರತಕ್ಕಂಥ ಸಂಪೂರ್ಣವಾಗಿ ನೀರಿನ ಕೊರತೆ ಮುಂದೆ ಬರುವ ಬೇಸಿಗೆ ಬಿಸಿಲಿನ ಕಾರಣವಾಗಿ, ಅಥವಾ ಮಳೆ ಅಭಾವದಿಂದ, ಅಂತರ್ಜಲ ಪ್ರಮಾಣ ಕಡಿಮೆ ಆಗಿರುವುದರಿಂದ ನೀರಿನ ಕೊರತೆಯ ತೊಂದರೆಯು ಉಂಟಾಗುವ ಪರಿಸ್ಥಿತಿ

ಬಂದಾಗ ಆ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸೂಕ್ತವಾದ ಕ್ರಮಗಳನ್ನು ಸರ್ಕಾರ ತೆಗೆದುಕೊಂಡು ಟಾಸ್ಕ್‌ಫೋರ್ಸ್ ಮುಖಾಂತರ ಕಾರ್ಯ ನಿರ್ವಹಿಸುವುದಕ್ಕೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಹಾಗೂ ಆ ಪ್ರಕಾರ ಸೂಚನೆಯನ್ನು ಅಧಿಕಾರಿಗಳಿಗೆ ಕೊಟ್ಟಿದ್ದೇವೆ.

**ಶ್ರೀ ಕೆ. ಪ್ರಭಾಕರ ಬಂಗೇರ:** ಮಾನ್ಯ ಅಧ್ಯಕ್ಷರೆ, ಸಮಸ್ಯೆ ಆದ ಕಡೆಗಳಲ್ಲಿ ಏನು ಮಾಡಬೇಕು ಎಂದು ಹೇಳಿದ್ದಾರೆ ಅದು ಸರಿಯಾಗಿದೆ. ಆದರೆ ಇನ್ನೂ ಕೂಡ ಎಲ್ಲೆಲ್ಲಿ ನೀರಿನ ವ್ಯವಸ್ಥೆ ಆಗಿಲ್ಲವೋ ಅಲ್ಲಿ ಅದಕ್ಕೆ ಈಗಾಗಲೇ ಕೆಲವು ಗ್ರಾಮ ಪಂಚಾಯತಿಗಳಿಂದ ಪ್ರಸ್ತಾವನೆಗಳು ಹೋಗಿವೆ. ಆದರೆ ಜಿಲ್ಲಾ ಪಂಚಾಯತಿಯಲ್ಲಿ ಈಗ ಈ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಮುಂದೆ ಸ್ವಜಲಧಾರ ಯೋಜನೆ ಬರುತ್ತದೆಯಲ್ಲ ಆಗ ಈ ಯೋಜನೆಯ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಸ್ವಜಲಧಾರ ಯೋಜನೆಯು ಕರ್ನಾಟಕ ರಾಜ್ಯದಲ್ಲಿ ಬರುವ ವರ್ಷದಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರುತ್ತದೆಯೆ? ಬರುವುದಿದ್ದರೆ ಎಷ್ಟು ಹಣವನ್ನು ಆ ಯೋಜನೆ ಮೂಲಕ ಬರುತ್ತದೆ ಎಂಬ ಬಗ್ಗೆ ಕೂಡ ಸಚಿವರು ಹೇಳಬೇಕೆಂದು ಕೇಳುತ್ತೇನೆ.

**ಶ್ರೀ ಬಿ. ಸತ್ಯನಾರಾಯಣ** (ಗ್ರಾಮೀಣ ನೀರು ಸರಬರಾಜು ಇಲಾಖಾ ಸಚಿವರು) : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕಳುಹಿಸಿದರೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ.

164 (2091) **ಶ್ರೀ ಹಾಲಪ್ಪ ಹೆಚ್ (ಹೊಸನಗರ)** ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಹೊಸನಗರ ತಾಲ್ಲೂಕಿನಲ್ಲಿ ಯಾವುದೇ ಖಾಸಗಿ ಮತ್ತು ಸರ್ಕಾರಿ ಪದವಿಪೂರ್ವ ಹಾಗೂ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಿಂದಿನ ಅಧಿವೇಶನದಲ್ಲಿ ಸರ್ಕಾರವು ನೀಡಿದ ಆಶ್ವಾಸನೆ ಯಾವ ಹಂತದಲ್ಲಿದೆ ;